# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತುರ್ತುಸಭೆ/ /2010-11 ದಿನಾಂಕ:28-06-2010

## -:: ತುರ್ತು ಸಭೆಯ ನಡವಳಿಕೆಗಳು ::-

ದಿನಾಂಕ:28-06-2010 ರಂದು ಸೋಮವಾರ ಬೆಳಿಗ್ಗೆ 12.00 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಎನ್. ಮಲ್ಲಿಕಾರ್ಜುನ** ರವರ ಅಧ್ಯಕ್ಷತೆಯಲ್ಲಿ ನಡೆದ ತುರ್ತುಸಭೆಯಲ್ಲಿ ಮಾನ್ಯ ಉಪಾಧ್ಯಕ್ಷರು, ಮಾನ್ಯ ಸದಸ್ಯರುಗಳು ಮತ್ತು ಮಾನ್ಯ ನಾಮ ನಿರ್ದೇಶಿತ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 24 | 07 | 31 |
| ನಾಮ ನಿರ್ದೇಶಿತ ಸದಸ್ಯರು | 03 | 02 | 05 |

ಮೊದಲಿಗೆ ನಗರಸಭೆಯ ಪೌರಾಯುಕ್ತರಾದ ಶ್ರೀ ಎಸ್.ಪ್ರಭುದೇವ್, ಕೆ.ಎಂ.ಎ.ಎಸ್, ರವರು ಮಾತನಾಡಿ, ಸಭೆಗೆ ಹಾಜರಾಗಿದ್ದ ನಗರಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀ ಎನ್. ಮಲ್ಲಿಕಾರ್ಜುನ ರವರಿಗೂ, ಉಪಾಧ್ಯಕ್ಷರಾದ ಶ್ರೀ ಎಸ್.ಜಿ.ಸೋಮರುದ್ರಶರ್ಮರವರಿಗೂ, ನಗರಸಭೆಯ ಎಲ್ಲಾ ಸದಸ್ಯರವರಿಗೂ ಹಾಗೂ ನಾಮ ನಿರ್ದೇಶಿತ ಸದಸ್ಯರವರಿಗೂ ಸಹ ಸ್ವಾಗತವನ್ನು ಬಯಸಿ, ಸಭೆಯನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿದರು.

ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು.

**ವಿಷಯ ಸಂಖ್ಯೆ:1**

ದಿನಾಂಕ:19-01-2009ರಂದು ನಡೆದು ವಿಶೇಷ ಸಭೆಯ ತೀರ್ಮಾನದಂತೆ, ನಗರದಲ್ಲಿ ರಸ್ತೆಗಳ ಅಗಲೀಕರಣ ಮಾಡುವ ಸಂಬಂಧ ದಿನಾಂಕ: 24-06-2010 ರಂದು ಬೆಂಗಳೂರು (ಗ್ರಾ) ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳವರು ನಡೆಸಿದ ಸಭೆಯಲ್ಲಿ ರಸ್ತೆ ಅಗಲೀಕರಣ ಸಂದರ್ಭದಲ್ಲಿ ಅಗಲೀಕರಣದ ನಂತರ ಸಾರ್ವಜನಿಕ ಸೇವೆಗಳ ಪುನರ್ ಸ್ಥಾಪನೆಗೆ ವಿವಿಧ ಇಲಾಖೆಗಳು ಆಗುವ ವೆಚ್ಚಗಳ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಇವುಗಳನ್ನು ಪರಿಶೀಲಿಸಿ, ಈ ವೆಚ್ಚವನ್ನು ಭರಿಸುವ ವಿಚಾರ.

1. ನಗರಸಭೆಯ ಅಂದಾಜು ಮೊತ್ತ — ರೂ. 2987.40 ಲಕ್ಷಗಳು
2. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ದೊಡ್ಡಬಳ್ಳಾಪುರ — ರೂ. 143.00 ಲಕ್ಷಗಳು
3. ವಲಯ ಅರಣ್ಯಾಧಿಕಾರಿಗಳು, ದೊಡ್ಡಬಳ್ಳಾಪುರ — ರೂ. 12.80 ಲಕ್ಷಗಳು
4. ಲೋಕೋಪಯೋಗಿ ಇಲಾಖೆ, ದೊಡ್ಡಬಳ್ಳಾಪುರ — ರೂ. 9344.00 ಲಕ್ಷಗಳು
5. ದೂರವಾಣಿ ಸಂಪರ್ಕ ಇಲಾಖೆ, ದೊಡ್ಡಬಳ್ಳಾಪುರ — ರೂ. ಅಂದಾಜು ನೀಡಿರುವುದಿಲ್ಲ

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಗಿ ದಿನಾಂಕ:19-01-2009 ರಂದು ನಡೆದ ಸಭೆಯ ತೀರ್ಮಾನದಂತೆ ರಸ್ತೆ ಅಗಲೀಕರಣ ವಿಚಾರವಾಗಿ ಈ ಕಛೇರಿಯಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಕೂಲಂಕುಶವಾಗಿ ಪರಿಶೀಲಿಸಿ, ರಸ್ತೆ ಅಗಲೀಕಣರವಾದ ನಂತರ ಸಾರ್ವಜನಿಕ ಸೇವೆಗಳ ಪುರ್ನಸ್ಥಾಪನೆಗಾಗಿ ವಿವಿಧ ಇಲಾಖೆಗಳೊಂದಿಗೆ ನಾಲ್ಕು ಸಭೆಗಳಲ್ಲಿ ಮುಂಜಾಗ್ರತೆ ಕ್ರಮ ವಹಿಸುವ ಬಗ್ಗೆ ಸಭೆಗಳನ್ನು ಈಗಾಗಲೇ ನಡೆಸಿದ್ದು, ಸಾಕಷ್ಟು ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ಅಗಲೀಕರಣ ವಿಚಾರದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಮುಂಜಾಗ್ರತೆ ವಹಿಸಿರುವ ಬಗ್ಗೆ ಸಭೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ಪ್ರಸ್ತುತ ನಗರಸಭಾ ವ್ಯಾಪ್ತಿಯಲ್ಲಿನ ಕೆಲವು ಪ್ರಮುಖ ರಸ್ತೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ವಾಹನಗಳ ಮತ್ತು ಜನಸಂದಣಿ ದಟ್ಟಣಿಯ ಮೇರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆ ಅಗಲೀಕರಣ ಮಾಡುವುದು ಅತ್ಯಾವಶ್ಯಕವಾಗಿರುತ್ತದೆ. ಮುಂದುವರೆದು ಈ ಹಿಂದೆ ನಗರಸಭೆಯಲ್ಲಿ ತೀರ್ಮಾನಿಸಿದ್ದ ಮಾರುಕಟ್ಟೆ ರಸ್ತೆಯನ್ನು ಕೊಂಗಾಡಿಯಪ್ಪ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುವ ಬದಲು, ಕುಚ್ಚಪ್ಪನಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಆಂಜಿನಪ್ಪ ಸಿಲ್ಕ್ ಹೌಸ್ ಮುಂಭಾಗದ ರಸ್ತೆ ಮುಖಾಂತರ ಮತ್ತು ಮಾರ್ಕೇಟ್ ರಸ್ತೆ ಮುಖಾಂತರ ಹಾಗೂ ಬಿ.ಎಂ.ಶ್ರೀ ರಸ್ತೆಯವರೆಗೂ ವಿಸ್ಥರ ಮಾಡಲು ಮಧ್ಯದಲ್ಲಿ ಕೈಬಿಟ್ಟಿರುವ ಅಳತೆಗೆ ತಿದ್ದುಪಡಿ ಮಾಡಿಕೊಳ್ಳಲಾಯಿತು.

ಹಾಗೂ ರಸ್ತೆ ಅಗಲೀಕರಣವಾದ ನಂತರ ಸಾರ್ವಜನಿಕ ಸೇವೆಗಳ ಪುನರ್ ಸ್ಥಾಪನೆಗಾಗಿ ಹೆಚ್ಚು ಹಣದ ಅವಶ್ಯಕತೆ ಇರುತ್ತದೆ. ಪ್ರಸ್ತುತ ನಗರಸಭೆಯಲ್ಲಿ ಇಷ್ಟು ಹಣ ಇಲ್ಲದೇ ದೈನಂದಿನ ವಹಿವಾಟುಗಳಿಗಾಗಿ ಹಣ ವ್ಯಯವಾಗುತ್ತಿದ್ದು, ಇಂತಹ ಕಾರ್ಯಗಳಿಗೆ ಹೆಚ್ಚುವರಿಯಾಗಿ ಹಣವನ್ನು ಭರಿಸಬೇಕಾಗುತ್ತದೆ. ಅಲ್ಲದೇ ಈವರೆವಿಗೆ ದೂರವಾಣಿ ಸಂಪರ್ಕ ಇಲಾಖೆ, ದೊಡ್ಡಬಳ್ಳಾಪುರರವರು ಅಂದಾಜು ವೆಚ್ಚಗಳನ್ನು ನೀಡಿರುವುದಿಲ್ಲ. ಇದನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತೇವೆಂದು ತಿಳಿಸಿರುತ್ತಾರೆ.

ಆದರೆ ನಗರಸಭೆಯಿಂದ ಇಷ್ಟು ದೊಡ್ಡಮೊತ್ತದ ಹಣವನ್ನು ಭರಿಸುವುದು ಕಷ್ಟವಾಗಿದ್ದು, ಇಂತಹ ಕಾರ್ಯಗಳಿಗಾಗಿ ಸರ್ಕಾರದ ನೆರವು ಅತ್ಯಾವಶ್ಯಕವಾಗಿ ಬೇಕಾಗಿರುತ್ತದೆ. ಆದ್ದರಿಂದ ಈ ಪುನರ್‌ಸ್ಥಾಪನೆಯ ವೆಚ್ಚಗಳಿಗೆ ಹಣವನ್ನು ಸರ್ಕಾರವು ಭರಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳವರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವಾಗಿದ್ದು, ಕೂಡಲೇ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಈ ಪ್ರಸ್ಥಾವನೆಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ವಿನಂತಿಸಿಕೊಳ್ಳಬೇಕೆಂದು ಸರ್ವಾನುಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯ್ತು.

**ಹಾಗೂ ಈ ಕೆಳಕಂಡಂತೆ 1ನೇ ಹಂತದಲ್ಲ ನಗರಸಭಾ ವ್ಯಾಪ್ತಿಯ 4 ರಸ್ತೆಗಳನ್ನು ಅಂದರೆ,**

1) **ಕೊಂಗಾಡಿಯಪ್ಪ ಮುಖ್ಯ ರಸ್ತೆ:-**
   ಕೋರ್ಟ್ ರಸ್ತೆಯಿಂದ ಪ್ರಾರಂಭಗೊಂಡು ತೇರಿನಬೀದಿ ರಸ್ತೆಗೆ ಅಂತ್ಯಗೊಳ್ಳುತ್ತದೆ.
2) **ಮಾರ್ಕೇಟ್ ರಸ್ತೆ:-**
   ಕುಚ್ಚಪ್ಪನಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಆಂಜಿನಪ್ಪ ಸಿಲ್ಕ್ ಹೌಸ್ ಮುಂಭಾಗದ ರಸ್ತೆ ಮುಖಾಂತರ ಮತ್ತು ಮಾರ್ಕೇಟ್ ರಸ್ತೆ ಮುಖಾಂತರ ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುತ್ತದೆ.
3) **ಅ.ನ.ಕೃಷ್ಣರಾವ್ ರಸ್ತೆ:-**
   ಕುಚ್ಚಪ್ಪಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಕೊಂಗಾಡಿಯಪ್ಪ ಕಾಲೇಜು ರಸ್ತೆಗೆ ಅಂತ್ಯಗೊಳ್ಳುತ್ತದೆ.
4) **ಡಿ. ಕ್ರಾಸ್ ರಸ್ತೆ:-**
   ರಾಷ್ಟ್ರೀಯ ಹೆದ್ದಾರಿ 207 ನಿಂದ ಪ್ರಾರಂಭಗೊಂಡು ಗಾಂಧಿ ಸರ್ಕಲ್‌ವರೆಗೆ

**ಮತ್ತು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಒಟ್ಟು 5 ರಸ್ತೆಗಳನ್ನು ಅಂದರೆ,**

1) **ಮುಕ್ತಾಂಬಿಕ ರಸ್ತೆ (ಸಿ. ಕ್ರಾಸ್ ರಸ್ತೆ, ಕೊಡಿಗೇಹಳ್ಳಿ ರಸ್ತೆ)**
ಮುತ್ಯಾಲಮ್ಮ ದೇವಸ್ಥಾನದ ಹತ್ತಿರದ ನಗರಸಭೆ ಗಡಿಯಿಂದ ಪ್ರಾರಂಭಗೊಂಡು ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುತ್ತದೆ.

2) **ಶ್ರೀ ಕೊಂಗಾಡಿಯಪ್ಪ ಕಾಲೇಜ್ ರಸ್ತೆ,**
ನೆಲಮಂಗಲ ರಸ್ತೆಯ 28ನೇ ಮೈಲಿಗಲ್ಲಿನಿಂದ ಪ್ರಾರಂಭಗೊಂಡು ಕೊಂಗಾಡಿಯಪ್ಪ ಕಾಲೇಜು ತಾಲ್ಲೂಕು ಕಛೇರಿ ಮಾರ್ಗವಾಗಿ ಚಿಕ್ಕಬಳ್ಳಾಪುರ ರಸ್ತೆಯ 32.5 ಮೈಲಿಗಲ್ಲಿಗೆ.

3) **ಕೋರ್ಟ್ ರಸ್ತೆ,** (ಎ. ಕ್ರಾಸ್ ರಸ್ತೆ)
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.207 (ತುಮಕೂರು-ದೇವನಹಳ್ಳಿ ರಸ್ತೆ) ರಿಂದ ಪ್ರಾರಂಭಗೊಂಡು ಮುಕ್ತಾಂಭಿಕ ರಸ್ತೆಗೆ ಅಂತ್ಯಗೊಳ್ಳುತ್ತದೆ.

4) **ತೇರಿನಬೀದಿ ರಸ್ತೆ,**
ರೈಲ್ವೆಸ್ಟೇಷನ್‌ನಿಂದ ಪ್ರಾರಂಭಗೊಂಡು ರಂಗಪ್ಪ ಸರ್ಕಲ್ ಮುಖಾಂತರ ನೆಲಮಂಗಲ ರಸ್ತೆಯ ಕೆ.ಸಿ.ಪಿ. ಛತ್ರದವರೆಗೆ

5) **ಸ್ಕೌಟ್ ಕ್ಯಾಂಪ್ ರಸ್ತೆ**
ಬೆಂಗಳೂರು ರಸ್ತೆಯ ರೈಲ್ವೇಸ್ಟೇಷನ್ ಸರ್ಕಲ್‌ನಿಂದ ಪ್ರಾರಂಭಗೊಂಡು ಸ್ಕೌಟ್ ಕ್ಯಾಂಪ್ ರಸ್ತೆಯ ಕೆಂಪೇಗೌಡ ನಗರದ ಗಡಿಭಾಗದವರೆಗೆ

**ಅಗಲೀಕರಣ ಮಾಡಿದ ನಂತರ, 2ನೇ ಹಂತದಲ್ಲಿ ನಗರಸಭಾ ವ್ಯಾಪ್ತಿಯ 5 ರಸ್ತೆಗಳನ್ನು ಅಂದರೆ:-**

1) **ಗಾಣಿಗರಪೇಟೆ ರಸ್ತೆ (ವಡ್ಡರಪೇಟೆ ರಸ್ತೆ):-**
ತಾಲ್ಲೂಕು ಕಛೇರಿ ರಸ್ತೆಯಿಂದ ಪ್ರಾರಂಭಗೊಂಡು ಮುಕ್ತಾಂಬಿಕ ರಸ್ತೆಗೆ ಅಂತ್ಯಗೊಳ್ಳುತ್ತದೆ.

2) **ಕೋಟೆ ರಸ್ತೆ:-**
ಮಾರ್ಕೆಟ್ ರಸ್ತೆಯಿಂದ ಪ್ರಾರಂಭಗೊಂಡು ಟ್ಯಾಂಕ್ ರಸ್ತೆಗೆ ಅಂತ್ಯಗೊಳ್ಳುತ್ತದೆ.

3) **ತಾಲ್ಲೂಕು ಕಛೇರಿ ರಸ್ತೆ:-**
ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು 'ಡಿ' ಕ್ರಾಸ್ ರಸ್ತೆಗೆ ಅಂತ್ಯಗೊಳ್ಳುತ್ತದೆ.

4) **ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ:-**
ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ ರಸ್ತೆಗೆ ಅಂತ್ಯಗೊಳ್ಳುತ್ತದೆ.

5) **ಕನಕದಾಸ ರಸ್ತೆ :-**
ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಈ ರಸ್ತೆಗಳನ್ನು ಅಗಲೀಕರಣ ಮಾಡಲು ಈ ಕೆಳಕಂಡಂತೆ ತಯಾರಿಸಿರುವ ಅಂದಾಜು ವೆಚ್ಚವನ್ನು ಭರಿಸಲು ಸರ್ಕಾರದ ವತಿಯಿಂದ ಅನುಧಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು.

**ನಗರಸಭಾ ವ್ಯಾಪ್ತಿಯಲ್ಲಿ ತುಂಬಾ ಕಿರಿದಾದ ರಸ್ತೆಗಳಿಂದ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅಡೆತಡೆಗಳು ಉಂಟಾಗುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ ಮತ್ತು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಹಾಗೂ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪ್ರಮುಖ ರಸ್ತೆಗಳನ್ನು ಅಗಲೀಕರಣ ಮಾಡಿದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ತಯಾರಿಸಿರುವ ಲೈನ್ ಎಸ್ಟಿಮೇಟ್ ಮತ್ತು ಭೂ ಸ್ವಾಧಿನ ಬಗ್ಗೆ ಅಂದಾಜು ವಿವರ**

| ಕ್ರ.ಸಂ. | ರಸ್ತೆಯ ವಿವರ | ಹಾಲಿ ಇರುವ ರಸ್ತೆಯ ಅಗಲ (ಮೀ.ಗಳಲ್ಲಿ) | ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ರಸ್ತೆಯ ಅಗಲ (ಮೀ. ಗಳಲ್ಲಿ) | ಪ್ರಸ್ತುತವಾಗಿ ರಸ್ತೆಯ ಅಗಲೀಕರಣ ಮಾಡಲು ಉದ್ದೇಶಿಸಿರುವ ಅಗಲ (ಮೀ.ಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಕೌನ್ಸಿಲ್ ತೀರ್ಮಾನದಂತೆ ಹಾಗೂ ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ 12 ಮೀ.ಗಳಿಗೆ ಸೀಮಿತ ಗೊಳಿಸಿದಾಗ ತಯಾರಿಸಿರುವ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ಅಳತೆಗೆ ತಯಾರಿಸಿದ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ನಿವೇಶನ ಮತ್ತು ಸ್ವತ್ತಿನ ಮೌಲ್ಯ (ರೂ.ಲಕ್ಷಗಳಲ್ಲಿ) | ದೇವಸ್ಥಾನಗಳ ಮತ್ತು ಸರ್ಕಾರಿ ಕಟ್ಟಡಗಳ ವಿವರಗಳು |
|---|---|---|---|---|---|---|---|---|
| 1 | 2 | 3 | 4 | 6 | 7 | 8 | 9 | 10 |
| **ನಗರಸಭಾ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿವರ :**<br>**ಮೊದಲನೇ ಹಂತದಲ್ಲಿ ರಸ್ತೆ ಅಗಲೀಕರಣ ಮಾಡಲು ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿರುವ ರಸ್ತೆಗಳು :** | | | | | | | | |
| 1 | **<u>ಕೊಂಗಾಡಿಯಪ್ಪ ಮುಖ್ಯ ರಸ್ತೆ:</u>** ಕೋರ್ಟ್ ರಸ್ತೆಯಿಂದ ಪ್ರಾರಂಭಗೊಂಡು ತೇರಿನಬೀದಿ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ –1.23ಕಿ.ಮೀ.<br>ಅಗಲ – 5.50ಮೀ | 5.50 | 15.00 | 12.00 | 221.40 | 295.20 | 60.00 | 1) ದೇವಸ್ಥಾನ–10 ಸಂಖ್ಯೆ<br>2) ಸರ್ಕಾರಿ ಕಟ್ಟಡಗಳು–3 ಸಂಖ್ಯೆ |

| | | | | | | | | |
|---|---|---|---|---|---|---|---|---|
| 2 | **<u>ಮಾರ್ಕೆಟ್ ರಸ್ತೆ</u>**<br>ಕುಚ್ಚಪ್ಪನಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಆಂಜಿನಪ್ಪ ಸಿಲ್ಕ್ ಹೌಸ್ ಮುಂಭಾಗದ ರಸ್ತೆ ಮುಖಾಂತರ ಮತ್ತು ಮಾರ್ಕೇಟ್ ರಸ್ತೆ ಮುಖಾಂತರ ಹಾಗೂ ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 1.00ಕಿ.ಮೀ.<br>ಅಗಲ – 6.00ಮೀ. | 6.00 | 12.00 | 12.00 | 125.00 | 125.00 | 62.00 | 1) ದೇವಸ್ಥಾನ–2 ಸಂಖ್ಯೆ<br>2) ಸರ್ಕಾರಿ ಕಟ್ಟಡಗಳು–10 ಸಂಖ್ಯೆ |
| 3 | **<u>ಅ.ನ.ಕೃಷ್ಣರಾವ್ ರಸ್ತೆ</u>**<br>ಕುಚ್ಚಪ್ಪಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಕೊಂಗಾಡಿಯಪ್ಪ ಕಾಲೇಜು ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ –0.66ಕಿ.ಮೀ.<br>ಅಗಲ – 5.00ಮೀ. | 5.00 | 12.00 | 12.00 | 118.80 | 360.00 | 55.00 | 1) ದೇವಸ್ಥಾನ–2 ಸಂಖ್ಯೆ |

| | | | | | | | | |
|---|---|---|---|---|---|---|---|---|
| 4 | **<u>ಡಿ. ಕ್ರಾಸ್ ರಸ್ತೆ</u>**<br>ರಾಷ್ಟ್ರೀಯ ಹೆದ್ದಾರಿ 207 ನಿಂದ ಪ್ರಾರಂಭಗೊಂಡು ಗಾಂಧಿ ಸರ್ಕಲ್‌ವರೆಗೆ<br>ಉದ್ದ – 2.00ಕಿ.ಮೀ.<br>ಅಗಲ– 12ಮೀ. | 2.00 | 24.00 | 18.00 | 720.00 | 960.00 | 90.00 | 1) ದೇವಸ್ಥಾನ –5 ಸಂಖ್ಯೆ<br>2) ಸರ್ಕಾರಿ ಕಟ್ಟಡ–2ಸಂಖ್ಯೆ |
| | **ಒಟ್ಟು ಉದ್ದ 4.89 ಕಿ.ಮೀ.** | | | **ಒಟ್ಟು ರೂ.** | **1185.20** | **1740.20** | **267.00** | 1) 19ದೇವಸ್ಥಾನಗಳು<br>2) 15 ಸರ್ಕಾರಿ ಕಟ್ಟಡಗಳು |

1) ದಿನಾಂಕ:28–06–2010ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಮೇಲ್ಕಂಡ ರಸ್ತೆಗಳನ್ನು ಆಧ್ಯತೆ ಮೇರೆಗೆ ಮೊದಲನೆ ಹಂತದಲ್ಲಿ ಮತ್ತು ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ ರಸ್ತೆಯ ಅಗಲ 12 ಮೀ.ಗಳಿಗೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ದಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ) ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.1452.20 ಲಕ್ಷಗಳು**.

2) ಬೈಯ್ಯಪ್ಪ ವತಿಯಿಂದ ನಿಗದಿಪಡಿಸಿದ ರಸ್ತೆಯ ಅಗಲಕ್ಕೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ದಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ)ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.2007.00 ಲಕ್ಷಗಳು**.

| 2ನೇ ಹಂತದಲ್ಲಿ ರಸ್ತೆ ಅಗಲೀಕರಣ ಮಾಡಲು ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿರುವ ರಸ್ತೆಗಳು : | | | | | | | | |
|---|---|---|---|---|---|---|---|---|
| **ಕ್ರ.ಸಂ.** | **ರಸ್ತೆಯ ವಿವರ** | ಹಾಲಿ ಇರುವ ರಸ್ತೆಯ ಅಗಲ (ಮೀ.ಗಳಲ್ಲಿ) | ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ರಸ್ತೆಯ ಅಗಲ (ಮೀ.ಗಳಲ್ಲಿ) | ಪ್ರಸ್ತುತವಾಗಿ ರಸ್ತೆಯ ಅಗಲೀಕರಣ ಮಾಡಲು ಉದ್ದೇಶಿಸಿರುವ ಅಗಲ (ಮೀ.ಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಕೌನ್ಸಿಲ್ ತೀರ್ಮಾನದಂತೆ ಹಾಗೂ ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ 12 ಮೀ.ಗಳಿಗೆ ಸೀಮಿತ ಗೊಳಿಸಿದಾಗ ತಯಾರಿಸಿರುವ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ಅಳತೆಗೆ ತಯಾರಿಸಿದ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ನಿವೇಶನ ಮತ್ತು ಸ್ವತ್ತಿನ ಮೌಲ್ಯ (ರೂ.ಲಕ್ಷಗಳಲ್ಲಿ) | ದೇವಸ್ಥಾನಗಳ ಮತ್ತು ಸರ್ಕಾರಿ ಕಟ್ಟಡಗಳ ವಿವರಗಳು |
| 1 | 2 | 3 | 4 | 6 | 7 | 8 | 9 | 10 |
| 1 | **<u>ಗಾಣಿಗರಪೇಟೆ ರಸ್ತೆ</u>** **( ವಡ್ಡರಪೇಟೆ ರಸ್ತೆ)** ತಾಲ್ಲೂಕು ಕಛೇರಿ ರಸ್ತೆಯಿಂದ ಪ್ರಾರಂಭಗೊಂಡು ಮುಕ್ತಾಂಬಿಕ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 0.22ಕಿ.ಮೀ.<br>ಅಗಲ – 5.00ಮೀ. | 5.00 | 15.00 | 12.00 | 39.60 | 52.80 | 20.00 | 1) ದೇವಸ್ಥಾನ–1 ಸಂಖ್ಯೆ<br>2) ಸರ್ಕಾರಿ ಕಟ್ಟಡಗಳು–1 ಸಂಖ್ಯೆ |

| | | | | | | | | |
|---|---|---|---|---|---|---|---|---|
| 2 | **<u>ಕೋಟೆ ರಸ್ತೆ</u>**<br>ಮಾರ್ಕೆಟ್ ರಸ್ತೆಯಿಂದ ಪ್ರಾರಂಭಗೊಂಡು ಟ್ಯಾಂಕ್ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 0.63ಕಿ.ಮೀ.<br>ಅಗಲ – 5.00ಮೀ. | 5.00 | 5.00 | 12.00 | 113.40 | 113.40 | 40.00 | 1) ವಕ್ಫ್ ಬೋರ್ಡ್ ವಾಣಿಜ್ಯ ಸಂಕೀರ್ಣ–1 ಸಂಖ್ಯೆ.<br>2) ಸರ್ಕಾರಿ ಕಟ್ಟಡಗಳು–1 ಸಂಖ್ಯೆ.<br>3) ಮಸೀದಿ 1 ಸಂಖ್ಯೆ |
| 3 | **<u>ತಾಲ್ಲೂಕು ಕಛೇರಿ ರಸ್ತೆ</u>**<br>ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ<br>ಪ್ರಾರಂಭಗೊಂಡು 'ಡಿ' ಕ್ರಾಸ್‌ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 1.00ಕಿ.ಮೀ.<br>ಅಗಲ – 5.75ಮೀ. | 5.75 | 24.00 | 12.00 | 180.00 | 360.00 | 65.00 | 1) ದೇವಸ್ಥಾನ–2 ಸಂಖ್ಯೆ |
| 4 | **<u>ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ</u>**<br>ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 1.00ಕಿ.ಮೀ.<br>ಅಗಲ –5.75ಮೀ. | 5.75 | - | 12.00 | 180.00 | 180.00 | 70.00 | 1) ಸರ್ಕಾರಿ ಕಟ್ಟಡ –1 ಸಂಖ್ಯೆ |

-9-

| | | | | | | | | |
|---|---|---|---|---|---|---|---|---|
| 5 | **<u>ಕನಕದಾಸ ರಸ್ತೆ</u>**<br>ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ – 0.53ಕಿ.ಮೀ.<br>ಅಗಲ–5.00ಮೀ. | 5.00 | 15.00 | 12.00 | 85.40 | 115.00 | 35.00 | 1) ದೇವಸ್ಥಾನ –2 ಸಂಖ್ಯೆ<br>2) ಸರ್ಕಾರಿ ಕಟ್ಟಡ–1ಸಂಖ್ಯೆ |
| | **ಒಟ್ಟು ಉದ್ದ 3.38 ಕಿ.ಮೀ.** | | | **ಒಟ್ಟು ರೂ.** | **598.40** | **821.20** | **230.00** | **ಒಟ್ಟು ದೇವಸ್ಥಾನಗಳ ಸಂಖ್ಯೆ.5,<br>ಮಸೀದಿ–2,<br>ಸರ್ಕಾರಿ ಕಟ್ಟಡಗಳು–4 ಸಂಖ್ಯೆ.** |

1) ದಿನಾಂಕ:28–06–2010 ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿರುವಂತೆ 2ನೇ ಹಂತದಲ್ಲಿ ತೆಗೆದುಕೊಳ್ಳುವ ಮತ್ತು ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ ರಸ್ತೆಯ ಅಗಲ 12 ಮೀ.ಗಳಿಗೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ಧಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ) ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.828.40 ಲಕ್ಷಗಳು**.

2) ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ರಸ್ತೆಯ ಅಗಲಕ್ಕೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ಧಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ)ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.1051.20 ಲಕ್ಷಗಳು**.

# **ದೊಡ್ಡಬಳ್ಳಾಪುರ ನಗರ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿವರಗಳು**

| **ಕ್ರ.ಸಂ.** | **ರಸ್ತೆಯ ಹೆಸರು** | ಹಾಲಿ ಇರುವ ರಸ್ತೆಯ ಅಗಲ (ಮೀ.ಗಳಲ್ಲಿ) | ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ರಸ್ತೆಯ ಅಗಲ (ಮೀ.ಗಳಲ್ಲಿ) | ಪ್ರಸ್ತುತವಾಗಿ ರಸ್ತೆಯ ಅಗಲೀಕರಣ ಮಾಡಲು ಉದ್ದೇಶಿಸಿರುವ ಅಗಲ (ಮೀ.ಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಕೌನ್ಸಿಲ್ ತೀರ್ಮಾನದಂತೆ ಹಾಗೂ ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ 12 ಮೀ.ಗಳಿಗೆ ಸೀಮಿತ ಗೊಳಿಸಿದಾಗ ತಯಾರಿಸಿರುವ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ರಸ್ತೆಯ ಅಗಲೀಕರಣ ಆದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆಯ ಅಗಲ ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ಅಳತೆಗೆ ತಯಾರಿಸಿದ ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) | ನಿವೇಶನ ಮತ್ತು ಸ್ವತ್ತಿನ ಮೌಲ್ಯ (ರೂ.ಲಕ್ಷಗಳಲ್ಲಿ) | ದೇವಸ್ಥಾನಗಳ ವಿವರಗಳು |
|---|---|---|---|---|---|---|---|---|
| 1 | **ಮುಕ್ತಾಂಬಿಕ ರಸ್ತೆ (ಸಿ. ಕ್ರಾಸ್ ರಸ್ತೆ, ಕೊಡಿಗೇಹಳ್ಳಿ ರಸ್ತೆ)** ಮುತ್ಯಾಲಮ್ಮ ದೇವಸ್ಥಾನದ ಹತ್ತಿರದ ನಗರಸಭೆ ಗಡಿಯಿಂದ ಪ್ರಾರಂಭಗೊಂಡು ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುತ್ತದೆ. ಉದ್ದ – 2.80ಕಿ.ಮೀ. ಅಗಲ–11.35ಮೀ. | 11.35 | 15.00 | 15.00 | 1092.00 | 1092.00 | 280.00 | 8 ,ಸಂಖ್ಯೆ |

| | | | | | | | | |
|---|---|---|---|---|---|---|---|---|
| 2 | **<u>ಶ್ರೀ ಕೊಂಗಾಡಿಯಪ್ಪ ಕಾಲೇಜ್ ರಸ್ತೆ,</u>**<br>ನೆಲಮಂಗಲ ರಸ್ತೆಯ 28ನೇ ಮೈಲಿಗಲ್ಲಿನಿಂದ ಪ್ರಾರಂಭಗೊಂಡು ಕೊಂಗಾಡಿಯಪ್ಪ ಕಾಲೇಜು ತಾಲ್ಲೂಕು ಕಛೇರಿ ಮಾರ್ಗವಾಗಿ ಚಿಕ್ಕಬಳ್ಳಾಪುರ ರಸ್ತೆಯ 32.5 ಮೈಲಿಗಲ್ಲಿಗೆ.<br>ಉದ್ದ –4.50ಕಿ.ಮೀ.<br>ಅಗಲ–17.50ಮೀ. | 17.50 | 45.00 | 30.00 | 3510.00 | 3510.00 | 450.00 | 4ಸಂಖ್ಯೆ |
| 3 | **<u>ಕೋರ್ಟ್ ರಸ್ತೆ,</u> (ಎ. ಕ್ರಾಸ್ ರಸ್ತೆ)**<br>ರಾಷ್ಟ್ರೀಯ ಹೆದ್ದಾರಿ ಸಂಖ್ಯೆ.207 (ತುಮಕೂರು–ದೇವನಹಳ್ಳಿ ರಸ್ತೆ) ರಿಂದ ಪ್ರಾರಂಭಗೊಂಡು ಮುಕ್ತಾಂಭಿಕ ರಸ್ತೆಗೆ ಅಂತ್ಯಗೊಳ್ಳುತ್ತದೆ.<br>ಉದ್ದ –1.60 ಕಿ.ಮೀ.<br>ಅಗಲ–7.50ಮೀ.<br>ಅಗಲೀಕರಣ ಮಾಡಬೇಕಾದ ಉದ್ದ 0.80 ಕಿ.ಮೀ. | 17.50 | 15.00 | 15.00 | 312.00 | 312.00 | 80.00 | 5 ಸಂಖ್ಯೆ |

| | | | | | | | | |
|---|---|---|---|---|---|---|---|---|
| 4 | **<u>ತೇರಿನಬೀದಿ ರಸ್ತೆ,</u>** ರೈಲ್ವೆಸ್ಟೇಷನ್‌ನಿಂದ ಪ್ರಾರಂಭಗೊಂಡು ರಂಗಪ್ಪ ಸರ್ಕಲ್ ಮುಖಾಂತರ ನೆಲಮಂಗಲ ರಸ್ತೆಯ ಕೆ.ಸಿ.ಪಿ. ಛತ್ರದವರೆಗೆ ಉದ್ದ –4.80ಕಿ.ಮೀ. ಅಗಲ–13.00ಮೀ. | 13.00 | 15.00 | 15.00 | 1872.00 | 1872.00 | 480.00 | 6 ಸಂಖ್ಯೆ |
| 5 | **<u>ಸ್ಕೌಟ್ ಕ್ಯಾಂಪ್ ರಸ್ತೆ</u>** ಬೆಂಗಳೂರು ರಸ್ತೆಯ ರೈಲ್ವೇಸ್ಟೇಷನ್ ಸರ್ಕಲ್‌ನಿಂದ ಪ್ರಾರಂಭಗೊಂಡು ಸ್ಕೌಟ್ ಕ್ಯಾಂಪ್ ರಸ್ತೆಯ ಕೆಂಪೇಗೌಡ ನಗರದ ಗಡಿಭಾಗದವರೆಗೆ ಉದ್ದ –3.20ಕಿ.ಮೀ. ಅಗಲ–13.00ಮೀ. | 17.50 | 15.00 | 15.00 | 1248.00 | 1248.00 | 20.00 | 1 ಸಂಖ್ಯೆ |
| | **ಅಗಲೀಕರಣದಲ್ಲಿ ಬರುವ ನಿವೇಶನ ಮತ್ತು ಕಟ್ಟಡಗಳು 20.00 ಮೀ,** | | | ಒಟ್ಟು ರೂ | 8034.00 | 8034.00 | 1310.00 | 25 ಸಂಖ್ಯೆ |

1) ಕೌನ್ಸಿಲ್ ಸಭೆಯ ತೀರ್ಮಾನ ಮತ್ತು ಜಿಲ್ಲಾಧಿಕಾರಿಗಳ ಸಭೆಯ ತೀರ್ಮಾನದಂತೆ ರಸ್ತೆಯ ಅಗಲ 15 ಮೀ..ಗಳಿಗೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ಧಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ) ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.9344.00 ಲಕ್ಷಗಳು**.

2) ಬೈಯ್ಯಪ್ಪ ವತಿಯಿಂದ ನಿಗಧಿಪಡಿಸಿದ ರಸ್ತೆಯ ಅಗಲಕ್ಕೆ ಸೀಮಿತಗೊಳಿಸಿದಾಗ ರಸ್ತೆಯ ಅಗಲೀಕರಣದ ನಂತರ ಅಭಿವೃದ್ಧಿ ಕಾಮಗಾರಿ (ರಸ್ತೆಗಳ ಇಕ್ಕೆಲಗಳಲ್ಲಿ ಬರುವ ಕಟ್ಟಡಗಳನ್ನು ತೆರವುಗೊಳಿಸುವುದು, ಅವಶೇಷಗಳನ್ನು ಹೊರಸಾಗಿಸುವುದು, ರಸ್ತೆಯ ಎರಡೂ ಬದಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಿಸುವುದು, ಚರಂಡಿ ಮೇಲ್ಭಾಗದಲ್ಲಿ ಆರ್.ಸಿ.ಸಿ, ಸ್ಲ್ಯಾಬ್ ಹಾಕುವುದು, ಫುಟ್‌ಪಾತ್ ನಿರ್ಮಿಸಿ ಡಾಂಬರು ಮಾಡುವುದು, ಹಾಗೂ ನಿವೇಶನದ ಮೌಲ್ಯ)ಕೈಗೊಳ್ಳಲು ತಯಾರಿಸಿರುವ **ಅಂದಾಜು ವೆಚ್ಚ ರೂ.9344.00 ಲಕ್ಷಗಳು**.

---

**ಸಹಿ/–**
**(ಎನ್.ಮಲ್ಲಿಕಾರ್ಜುನ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**“ ನಕಲು ಪ್ರತಿ ”**
**ಸಹಿ/–**
**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**